(ಗೊಂದಲ)

ಉಪಾಧ್ಯಕ್ಷರು :– ನಾನು ಈಗ ಬೇಡಿಕೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"31–03–2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 1ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗಳನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

(ಮಾನ್ಯರು ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ)

<u>ಅಭಿಯಾಚನೆ ಕ್ರಮಾಂಕ –1 ಕೃಷಿ ಮತ್ತು ತೋಟಗಾರಿಕೆ</u>

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕೃಷಿ ಮತ್ತು ತೋಟಗಾರಿಕೆ' ಇಲಾಖೆಗಳ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10258011 ಲಕ್ಷ ರೂಪಾಯಿಗಳಿಗಿಂತ ಹಾಗೂ ಬಂಡವಾಳ ಖಾತೆಯಲ್ಲಿ 3091.07 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಉಪಾಧ್ಯಕ್ಷರು :– ಈಗ ಶಿಕ್ಷಣ ಸಚಿವರು.

5) ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಸದನವನ್ನು ಮುಂದೂಡಿಸುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ನಾವು ಬೆಳಿಗ್ಗೆ ಹತ್ತು ಗಂಟೆಗೆ ಬಂದಿದ್ದೇವೆ. ಆದ್ದರಿಂದ ದಯವಿಟ್ಟು ನಮಗೆ ಹೋಗಲು ಪರವಾನಗಿ ಕೊಡಿ.

ಶ್ರೀ ಡಿ. ಮಂಜುನಾಥ್ :– ಮಾನ್ಯ ಪಾಟೀಲ್‌ರೆ, ಸಮಯ ಇಲ್ಲ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷರೆ, ಸದನವನ್ನು ದಯಮಾಡಿ ಮುಂದಕ್ಕೆ ಹಾಕಿ. ಈಗಾಗಲೇ ಏಳು ಗಂಟೆಯಾಗಿದೆ. ನಮಗೆ ನಿಮ್ಮ ಮೇಲೆ ಗೌರವವಿದೆ.

ಇಲ್ಲದಿದ್ದರೆ ನೀವು ಏನು ಬೇಕಾದರೂ ಮಾಡಿಕೊಳ್ಳಿ. ನಾವು ಬೆಳಿಗ್ಗೆ ಹತ್ತು ಗಂಟೆಗೆ ಬಂದಿದ್ದೇವೆ. ನಮ್ಮನ್ನೇನು ತಿಳಿದುಕೊಂಡಿದ್ದೀರಿ? ಇಲ್ಲ ಆಗುವುದಿಲ್ಲ, ಏನು ಬೇಕಾದರೂ ಮಾಡಿಕೊಂಡು ಹೋಗಿ.

ಶ್ರೀ ಡಿ. ಮಂಜುನಾಥ್ :– ಇವತ್ತು ಸ್ಪೀಕರ್ ಹೇಳಿದ್ದು, ಏನೆಂದರೆ ಈ ಡಿಮ್ಯಾಂಡ್‌ನ್ನು ಇವತ್ತೇ ಮುಗಿಸಬೇಕೆಂದು ಹೇಳಿದರು.

(ಮಾನ್ಯ ವಾಟಾಳ್ ನಾಗರಾಜ್‌ರವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಉಪಾಧ್ಯಕ್ಷರು :– ಪ್ರಶ್ನೋತ್ತರ ಇದೆ.

ಶ್ರೀ ಡಿ.ಮಂಜುನಾಥ್ :– ರಾತ್ರಿ ಒಂಭತ್ತರವರೆಗೆ ನಡೆಸಿದ್ದು ಇದೆ.

ಮಾನ್ಯ ಸದಸ್ಯರು :– ಒಬ್ಬೊಬ್ಬ ಹಿರಿಯ ಸದಸ್ಯರು ನಾಲ್ಕು ನಾಲ್ಕು ಐದೈದು ಗಂಟೆ ಮಾತನಾಡುತ್ತಾರೆ.

ಶ್ರೀ. ಡಿ. ಮಂಜುನಾಥ್ :– ನಾಳೆ ಬೇರೆ ಬೇಡಿಕೆಗಳು ಇವೆ. ಇವತ್ತು ಇದನ್ನು ಪೂರ್ಣ ಮುಗಿಸಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು :– ಈಗ ಅರ್ಧ ಗಂಟೆಯಲ್ಲಿ ಮುಗಿದು ಬಹಳ ಲೇಟಾಗಿಬಿಟ್ಟಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅದು ಹೇಗೆ ಆಗುತ್ತದೆ? ನಾಳೆ ತೆಗೆದುಕೊಳ್ಳಿ. ಇಲ್ಲ ಅಂದರೆ ನಾವು ಧರಣಿ ಮಾಡುತ್ತೇವೆ

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ :– ನಮ್ಮದೇನೂ ತಕರಾರು ಇಲ್ಲ ನಾಳೆ ಬೆಳಿಗ್ಗೆ ಉತ್ತರ ಕೊಡುವುದರಲ್ಲಿ ತಪ್ಪೇನಿಲ್ಲ. ನಾಳೆ ಬೆಳಿಗ್ಗೆ ಒಂಭತ್ತು ಗಂಟೆಗೆ ಎಲ್ಲರೂ ಬರಲಿ. ಒಂಭತ್ತು ಗಂಟೆಗೆ ಉತ್ತರ ನೀಡಬೇಡಿ. ಅವರಿಬ್ಬರೂ ಅರ್ಧ ತಾಸು ಉತ್ತರ ಕೊಡಲಿ, ಪಾಸು ಮಾಡಿ. ನಾವೂ ಕೂಡ ಹೇಳುತ್ತೇವೆ, ನಾಳೆ ಇಡಲು ಅಡ್ಡಿ ಇಲ್ಲ, ನಾಳೆ ಬೆಳಿಗ್ಗೆ ಒಂಭತ್ತು ಗಂಟೆಗೆ ಸಭೆ ಕರೆದುಬಿಡಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :– ಮಾನ್ಯ ಉಪಾಧ್ಯಕ್ಷರೆ, ಬೆಳಿಗ್ಗೆ ಹತ್ತು ಗಂಟೆಗೆ ಶುರುವಾಗಿದ್ದು. ಈಗ ಏಳು ಗಂಟೆಯಾಗಿದೆ. ನಾವು ಸೋತುಹೋಗಿದ್ದೇವೆ. ಮೀಡಿಯಾದವರೂ ನಮ್ಮ

ಜೊತೆ ಕುಳಿತುಕೊಂಡಿದ್ದಾರೆ.

ಉಪಾಧ್ಯಕ್ಷರು :– ಈಗ ಉತ್ತರ ಕೊಡಲಿಬಿಡಿ, ಬೇಗ ಆಗುತ್ತದೆ. ನಾಳೆ ಬೆಳಿಗ್ಗೆ 8 ಗಂಟೆಗೆ ಸ್ಪೋರ್ಟ್ಸ್‌ಗೆ ಹೋಗುವುದೂ ಕೂಡ ಇದೆ. ಇನ್ನೊಂದು ಅರ್ಧ ಗಂಟೆಯಲ್ಲಿ ಎಲ್ಲವನ್ನೂ ಮುಗಿಸಿಬಿಟ್ಟರೆ ಒಳ್ಳೆಯದಲ್ಲವೆ?

(ಮಾನ್ಯ ವಾಟಾಳ್ ನಾಗರಾಜ್‌ರವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಇಲ್ಲಿ ವಿರೋಧ ಪಕ್ಷದವರದ್ದು ಅಷ್ಟೇ ಅಲ್ಲ; ಆಡಳಿತ ಪಕ್ಷದವರದ್ದೂ ವಿರೋಧ ಪಕ್ಷದವರದ್ದು ಎಲ್ಲರದ್ದೂ ಒಂದೇ ಆಗಿದೆ.

(ಗೊಂದಲ)

ಶ್ರೀ ಡಿ. ಮಂಜುನಾಥ್ :– ಬೆಳಿಗ್ಗೆ ಬೇರೆ ಬೇಡಿಕೆಗಳು ಇದ್ದಾವಲ್ಲಾ?

(ಗೊಂದಲ)

ಶ್ರೀ ಡಿ. ಮಂಜುನಾಥ್ :– ಅಧ್ಯಕ್ಷರಿಗೆ ಬಿಟ್ಟಿದ್ದು, ಅವರು ಏನು ಹೇಳುತ್ತಾರೋ ಹಾಗೆ. ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಉಪಾಧ್ಯಕ್ಷರೆ, ಆಡಳಿತ ಪಕ್ಷದವರೂ ನಮ್ಮ ಹಾಗೆಯೇ ಇದ್ದಾರೆ, ಬೇಕಾದರೆ ಅವರನ್ನು ನೋಡಿ.

ಶ್ರೀ ಡಿ. ಮಂಜುನಾಥ್ :– ಅನೇಕ ಸಲ ರಾತ್ರಿ ಒಂಭತ್ತು ಗಂಟೆಯವರೆಗೆ ಕುಳಿತುಕೊಂಡಿದ್ದೇವೆ. ಸಮಯ ಮತ್ತೆ ಸಿಕ್ಕುವುದಿಲ್ಲ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :– ಈಗ ಮೂರು ಜನ ಮಂತ್ರಿಗಳ ರಿಪ್ಲೈ ಇದೆ. ಬೆಳಿಗ್ಗೆ ಮೊದಲು ಇದನ್ನು ಮುಗಿಸಿ ಆಮೇಲೆ ಬೇರೆ ಬೇರೆ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳೋಣ. ಏಕೆಂದರೆ ಬೆಳಿಗ್ಗೆಯಿಂದ ಎಲ್ಲರೂ ಒಂದೇ ಸಮನೆ ಕುಳಿತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ :– ವಿರೋಧ ಪಕ್ಷ ಪೂರ್ಣವಾಗಿ ಹೋದರೆ ಕೋರಂ ಕೂಡ ಶಾರ್ಟೇಜ್ ಆಗುವಂಥ ಸ್ಥಿತಿ ಬರುತ್ತದೆ. ಮಾನ್ಯ ರಾಮಲಿಂಗಾರೆಡ್ಡಿಯವರೇ, ಸದಸ್ಯರನ್ನು ಕೂರಿಸುವುದು ದೊಡ್ಡದಲ್ಲ. ಇರುವವರನ್ನು ಹಿಡಿದು ಹಾಕುವ ಕೆಲಸ ಮಾಡಬೇಡಿ. ಈ ಸದನದಲ್ಲಿ ನೀವು ಕೊಡತಕ್ಕ ಉತ್ತರ ಇಡೀ ರಾಜ್ಯದ ಜನತೆ ನೋಡುತ್ತಿರುತ್ತದೆ. ನೀವು ಯಾರೋ ನಾಲ್ಕು ಜನ ಆಡಳಿತ ಪಕ್ಷದವರಿಗೆ ಉತ್ತರ

ಕೊಟ್ಟುಕೊಳ್ಳುತ್ತೀರಾ? ಆಡಳಿತ ಪಕ್ಷಕ್ಕೋಸ್ಕರ ಕೊಡುವಂಥ ಉತ್ತರವಾದರೆ ನಮ್ಮದೇನೂ ಅಭ್ಯಂತರವಿಲ್ಲ. ಕ್ಲಾರಿಫಿಕೇಷನ್ಸ್‌ನ್ನು ನಾವು ಕೇಳಬೇಕಾಗುತ್ತದೆ. ಹಾಗಾಗಿ ಸ್ವಲ್ಪ ನೀವು ಉದಾರ ತೋರಿಸಿ. ನಾಳೆ ಸ್ವಲ್ಪ ಹೆಚ್ಚು ಸಮಯ ಬೇಕಾದರೆ ಕುಳಿತುಕೊಳ್ಳೋಣ.

ಶ್ರೀ ಅರಗ ಜ್ಞಾನೇಂದ್ರ :– ಎಲ್ಲದಕ್ಕಿಂತ ಇಂಡಿವಿಜುಯಲ್ ಆಗಿ ಒಬ್ಬೊಬ್ಬ ಮಂತ್ರಿಗಳು ಅವರ ಖಾತೆಯ ಮೇಲೆ ಉತ್ತರ ಕೊಡುತ್ತಿರುವುದು ಈ ಎರಡು ಮೂರು ವರ್ಷಗಳಲ್ಲಿ ಇದು ಫಸ್ಟ್ ಟೈಮ. ಹಾಗಾಗಿ ಡಿಬೇಟ್ಸ್ ಎಲ್ಲಾ ಚೆನ್ನಾಗಿ ಆಗುತ್ತಿದೆ. ನಿಮಗೂ ಒಂದು ಅವಕಾಶ. ನೋಡಿ ಮೀಡಿಯಾದವರೆಲ್ಲಾ ಹೊರಟುಬಿಟ್ಟಿದ್ದಾರೆ. ಅದು ಇದು, ಎಂದು ಹೇಳುವುದಿಲ್ಲ, ಅವರೂ ಬೆಳಿಗ್ಗೆಯಿಂದ ಕುಳಿತಿರುತ್ತಾರೆ. ಏನೆಂದರೆ, ಈಗ ತೋಟಗಾರಿಕೆಯದು ಉಪಯುಕ್ತವಾಗಿರತಕ್ಕ ಡಿಬೇಟ್ ಆಯಿತು.

(ಗೊಂದಲ)

ಉಪಾಧ್ಯಕ್ಷರು :– ಶಿಕ್ಷಣ ಸಚಿವರು ತಾವು ಪ್ರಾರಂಭ ಮಾಡಿ ನೋಡೋಣ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ನಮ್ಮ ಎಲ್ಲರ ಪರಿಸ್ಥಿತಿ ಒಂದೇ ಆಗಿದೆ. ಬೆಳಿಗ್ಗೆ ಸ್ಪೋರ್ಟ್ಸ್‌ಗೆ ಹೋಗಬೇಕು. ಬೆಳಿಗ್ಗೆ ಎಲೆಕ್ಷನ್ ಎಂದು ಒಂಭತ್ತು ಗಂಟೆಗೆ ಬಂದಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ :– ಎಂಟೂ ಮುಕ್ಕಾಲಿಗೇ ಬಂದಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ತಮಗೆ ಯಾರೂ ಇಲ್ಲದೆ ಹೋದಾಗಲೆ ಉತ್ತರ ಕೊಟ್ಟು ನಾವು ಮಾಡಿದ್ದೆಲ್ಲಾ ಸರಿಯೆಂದು ಹೇಳಿಸಿಕೊಳ್ಳಬೇಕಾಗಿದ್ದರೆ ಮಾಡಿಕೊಳ್ಳಿ, ಅದು ಬೇರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ ವಿರೋಧ ಪಕ್ಷದವರದ್ದು, ಮಾನ್ಯ ವಾಟಾಳ್‌ನಾಗರಾಜ್‌ರು ಇರಬಹುದು ಮಾಧುಸ್ವಾಮಿಯವರು ಇರಬಹುದು, ಈ ರೀತಿ ಎಲ್ಲಾ ಒಂದು ತೀರ್ಮಾನ ತೆಗೆದುಕೊಂಡಾಗ ಭಾರತೀಯ ಜನತಾ ಪಕ್ಷವನ್ನು ದಯವಿಟ್ಟು ಇಕ್ಕಟ್ಟಿಗೆ ಸಿಕ್ಕಿಸುವ ಪ್ರಯತ್ನವನ್ನು ನೀವು ಮಾಡಬೇಡಿ. ನಾನು ಅದಕ್ಕೋಸ್ಕರ ಹೇಳುತ್ತಿರುವುದು. ತೀರಾ ಅವರು ಉತ್ತರ ಕೊಟ್ಟೇ ಕೊಡುತ್ತೇನೆಂದರೆ....

ಶ್ರೀ ಡಿ. ಮಂಜುನಾಥ್ :– ಅಧ್ಯಕ್ಷರು ಹೇಳಿದರೆ ಕೊಡುತ್ತೇನೆ. ಇಲ್ಲದಿದ್ದರೆ ಬೇಡ. ಅಧ್ಯಕ್ಷರು ಅವಕಾಶ ಕೊಟ್ಟರೆ ಕೊಡುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಸದಸ್ಯರು ಇಲ್ಲದಿದ್ದಾಗ ಮುಚ್ಚಿಕೊಳ್ಳಬೇಕೆಂದಿದ್ದರೆ ಮುಚ್ಚಿಕೊಳ್ಳಲಿ.

(ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಅರಗ ಜ್ಞಾನೇಂದ್ರ :– ಈಗ ಏಟ್ರಿಯಾ ಹೋಟೆಲ್‌ಗೆ, ಕಾರ್ಯಕ್ರಮಕ್ಕೆ ಬರಬೇಕಲ್ಲಾ, ಸರ್ಕಾರದ ಕಡೆಯಿಂದಲೇ ಸನ್ಮಾನ್ಯ ಶ್ರೀ ಮಹೇಶ್ ಭೂಪತಿಯವರಿಗೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಇಷ್ಟೆಲ್ಲಾ ಪ್ರೊಟೆಸ್ಟ್ ಮಾಡಿದೆಮೇಲೆ, ನೀವು ಅಪರೂಪಕ್ಕೆ ಛೇರ್‌ನಲ್ಲಿ ಕುಳಿತಿದ್ದೀರಿ, ಅಪಕೀರ್ತಿಗೆ ನೀವು ಏಕೆ ಹೊಣೆಯಾಗಬೇಕು?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :– ಮಹೇಶ್ ಭೂಪತಿಯವರಿಗೆ ಸನ್ಮಾನ ಇಟ್ಟುಕೊಂಡಿದ್ದೇವೆ. ಇಂಥ ಸಂದರ್ಭದಲ್ಲಿ ನಾವು ಹೋಗಲಿಲ್ಲವೆಂದರೆ ಅವರಿಗೂ ಅವಮಾನವಾಗುತ್ತದೆ.

ಉಪಾಧ್ಯಕ್ಷರು :– ಈಗ ಹೇಳಿ ಶಿಕ್ಷಣ ಸಚಿವರು. ಶಿಕ್ಷಣ ಸಚಿವರು ನೀವು ಉತ್ತರ ಕೊಡಿ.

(ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿ ಕುಳಿತು ಮಾತನಾಡುತ್ತಿದ್ದರು)

ಶ್ರೀ ತನ್ವೀರ್‌ಸೇಠ್ :– ಮಾನ್ಯ ಉಪಾಧ್ಯಕ್ಷರೇ, ಇವತ್ತು ಪ್ರತಿಪಕ್ಷ ಇಲ್ಲದೆಯೆ ಸರ್ಕಾರ ನಡೆಸುವಂಥ ಪ್ರಮೇಯ ಬಂದಿಲ್ಲ. ಇವತ್ತು ಉತ್ತರ ಕೊಡಬೇಕಾಗಿರತಕ್ಕದ್ದು ಪ್ರತಿಪಕ್ಷದವರು ಇದ್ದಂಥ ಸಂದರ್ಭದಲ್ಲಿ ಕೊಡೋಣ. ಸದನದ ಸಮಯವನ್ನು ವ್ಯರ್ಥ ಮಾಡಿರುವುದೂ ನಾವೇ. ಸಚಿವರು ಎಲ್ಲೂ ಹೋಗಿಲ್ಲ, ಉತ್ತರ ಕೊಡಲು ಇವತ್ತೂ ತಯಾರು ಇದ್ದೇವೆ. ನಾಳೆ ಎಂದರೆ ನಾಳೆಯೂ ತಯಾರು. ನಾಳೆ ಬೆಳಿಗ್ಗೆ ಸ್ವಲ್ಪ ಮುಂಚಿತವಾಗಿ ಸಭೆ ಕೆರೆದು ಉತ್ತರ ನೀಡಿದರೆ ಅದರಲ್ಲಿ ಅರ್ಥ ಇರುತ್ತದೆ. ಅವರ ಪ್ರಶ್ನೆಗಳಿಗೆ ನಾವು ಉತ್ತರ ನೀಡಬೇಕಾಗಿರುವಂಥದ್ದು ಇರುತ್ತದೆ. ಇಲ್ಲದಿದ್ದರೆ ನನ್ನ ಇಲಾಖೆಯ ವಿಚಾರದಲ್ಲಿ ಮಾತನಾಡಬೇಕೆಂದರೆ, ನನ್ನ ಬೇಡಿಕೆಗಳು....

ಶ್ರೀ ಎಸ್.ಎಸ್. ಪಾಟೀಲ್ :– ನಾವು ಸ್ಪಷ್ಟವಾಗಿ ಹೇಳುತ್ತೇವೆ, ದಯವಿಟ್ಟು ಸದನವನ್ನು ನಾಳೆಗೆ ಮುಂದಕ್ಕೆ ಹಾಕಿ. ನಾವೂ ಕೂಡ ಹೇಳುತ್ತೇವೆ. ನಮ್ಮಗೂ ಕೂಡ ಬೇಜಾರಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಇನ್ನು ಯಾರು ಹೇಳಬೇಕು ನಿಮ್ಮ ಮನವೊಲಿಸಲು? ನಿಮ್ಮ ಮನವೊಲಿಸಲು ಇನ್ನೇನು ಮಾಡಬೇಕು?

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ :– ಸುಮ್ಮನೆ ಇದೆಲ್ಲಾ ಸರಿಯಲ್ಲ. ಪೂರ್ಣ ವಿರೋಧ ಪಕ್ಷದವರನ್ನು ಹೊರಗಿಟ್ಟು ಮಾಡುವುದೂ ಸರಿಯಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ನಿಮ್ಮ ಮನವೊಲಿಸಲು ಇನ್ನೇನು ಮಾಡಬೇಕು? ನಾವು ಆಡಳಿತ ಪಕ್ಷದವರು ಎಲ್ಲರೂ ಹೇಳುತ್ತಿದ್ದೇವೆ.

ಶ್ರೀ ಶಿವಾನಂದ ಪಾಟೀಲ್ :– ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಹಾಕಿ.

ಶ್ರೀ ಎಸ್.ಎಸ್. ಪಾಟೀಲ್ :– ನಾಳೆ ಅರ್ಧ ತಾಸು ಅವರು ಉತ್ತರ ಕೊಡಲಿ ಅವರು ಅರ್ಧ ತಾಸು ಪ್ರಶ್ನೆ ಕೇಳಲಿ, ಮುಂಜಾನೆ ಮುಗಿಸೋಣ ನಾಳೆಗೆ ಮಾಡಿಬಿಡುವುದು ಒಳ್ಳೆಯದು.

ಶ್ರೀ ತನ್ವೀರ್‌ಸೇಠ್ :– ಕಟ್ಟುನಿಟ್ಟಾಗಿ ಒಂದೊಂದು ಇಲಾಖೆಗೆ ಎಷ್ಟು ಸಮಯ ನಿಗದಿ ಮಾಡಬೇಕು ಅದರಲ್ಲಿ ನೀವು ಮಾಡಿಕೊಂಡು ಹೋಗಲು....

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಮಾನ್ಯ ಉಪಾಧ್ಯಕ್ಷರೆ, ಶಿಕ್ಷಣ ಇಲಾಖೆ ಬೇಡಿಕೆ ಉತ್ತರದ ಮೇಲೆ ಬಹಳ ಜನ ಕ್ಲಾರಿಫಿಕೇಷನ್ ಕೇಳುವವರು ಇರುತ್ತಾರೆ....

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ :– ಉತ್ತರ ಕೊಡಲಿಕ್ಕೆ ನಾವು ಕಾಯುತ್ತಿದ್ದೇವೆ. ಇವರು ಮಧ್ಯೆ ಮಧ್ಯೆ interfere ಆಗಿದ್ದರಿಂದ ಸಮಯ ಜಾಸ್ತಿ ಹಿಡಿಯಿತು....

(ಗೊಂದಲ)

ಮಾನ್ಯ ಸದಸ್ಯರು :– ಮಾನ್ಯ ಮಂತ್ರಿಗಳೊಬ್ಬರೇ ಮೂರು ತಾಸು ಭಾಷಣ ಮಾಡಿದರು, ಉತ್ತರ ಕೊಡಲಿಲ್ಲ. ಅದರ ಬಗ್ಗೆ ನೀವೇನೂ ಹೇಳುವುದಿಲ್ಲವಲ್ಲಾ?

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಅವರು ಹೇಳುವುದು ಒಂದು ಕಡೆ ಇರಲಿ. ತಾವು

ಇವತ್ತೇ ತೆಗೆದುಕೊಳ್ಳುತ್ತೀರಿ ಎಂದರೆ, ನಾವು ಅನಿವಾರ್ಯವಾಗಿ ಕುಳಿತುಕೊಳ್ಳಬೇಕಾಗುತ್ತದೆ. ಶಿಕ್ಷಣ ಇಲಾಖೆ ಮೇಲೆ ಬಹುತೇಕ ಸದಸ್ಯರು ಕ್ಲಾರಿಫಿಕೇಷನ್ ಕೇಳುವವರಿರುತ್ತಾರೆ. ಇಡೀ ಒಂದು ವರ್ಷಕ್ಕೆ ನಾವು ಅವರಿಗೆ ಅನುದಾನ ಕೊಡತಕ್ಕಂಥ ವಿಚಾರ. ಸ್ಪಷ್ಟೀಕರಣ ಕೇಳುವುದಕ್ಕೆ ಈಗ ಬಿಟ್ಟರೆ ಮತ್ತೆ ಅವಕಾಶಗಳು ಪ್ರಶ್ನೋತ್ತರದಲ್ಲಿ ಮಾತ್ರ ಸಿಗುತ್ತದೆ. ಜುಲೈ 22, 23ಕ್ಕೆ ಶಾಸಕರ ದಿನಾಚರಣೆ ಇಟ್ಟುಕೊಂಡಿರುವುದರಿಂದ, ಬೇರೆ ಬೇರೆ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕಾದವರು ಬೆಳಿಗ್ಗೆ ಅಷ್ಟೊತ್ತಿಗೆ ಏಳುತ್ತಿದ್ದೇವೆ, ಹೋಗಿ ಬರುವುದು, ಇಡೀ ದಿವಸ ನಡೆಯುತ್ತಿದೆ. ನಮಗಾಗಿ ಕಾದಿರತಕ್ಕಂಥ ವಿಸಿಟರ್ಸ್ ಇರುತ್ತಾರಲ್ಲಾ, ಅವರಿಗೆ ನಮ್ಮ ಮೇಲೆ ದಯೆ ಇರುವುದಿಲ್ಲ. ಇಷ್ಟೊತ್ತು ಆದರೂ ಸಹ ಅವರು ಕಾದಿರುತ್ತಾರೆ. ಇದರಿಂದ ಬಹಳ ಶ್ರಮವಾಗುತ್ತದೆ. ತಾವು ನಮ್ಮ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕು. ಇಂತದ್ದೇ ಸನ್ನಿವೇಶವನ್ನು ಬಳಸಿಕೊಂಡು ಉತ್ತರ ಕೊಟ್ಟು ಬಿಟ್ಟರು ಎಂಬ ಆಪಾದನೆಗೆ ಸರ್ಕಾರ ಸಿಕ್ಕಿಹಾಕಿಕೊಳ್ಳುವುದು ಬೇಡ. ದಯಮಾಡಿ ದೊಡ್ಡ ಮನಸ್ಸು ಮಾಡಿ ಸಭೆಯನ್ನು ಮುಂದಕ್ಕೆ ಹಾಕಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ :– ಉತ್ತರ ಕೊಡುವುದಿದ್ದರೆ ಇವತ್ತು ಕೊಡುತ್ತೇನೆ. ಇಲ್ಲದಿದ್ದರೆ ಅದನ್ನು ಸೋಮವಾರ ತೆಗೆದುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ :– ಅದಕ್ಕೇನಾದರೂ ದಿನ ನಿಗದಿ ಮಾಡಿದ್ದೀರಾ? ಜ್ಯೋತಿಷ್ಯ ಏನಾದರೂ ಕೇಳಿಕೊಂಡು ಬಂದಿದ್ದೀರಾ?

ಶ್ರೀ ರಾಮಲಿಂಗಾರೆಡ್ಡಿ :– ದೆಹಲಿಯಲ್ಲಿ HRD ಮೀಟಿಂಗ್ ಇದೆ. ಅದಕ್ಕಾಗಿ ಆ ರೀತಿ ಹೇಳಿದೆ. ಮಾನ್ಯ ಈಶ್ವರಪ್ಪನವರು ನಾನು ಹೇಳಿದ್ದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ. ಆತುರ ಬೀಳುತ್ತೀರಿ.

(ಗೊಂದಲ)

ಶ್ರೀ ತನ್ವೀರ್ ಸೇಠ್ :– ನನ್ನದೊಂದು ಇಲಾಖೆಯದು ಇವತ್ತು ತೆಗೆದುಕೊಂಡು ಬಿಡುತ್ತೀರಾ?.....

(ಗೊಂದಲ)

ಉಪಾಧ್ಯಕ್ಷರು :– ಸದನ ಇನ್ನೂ 24 ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾಗಿದೆ. ನಿಮಗೆ ಸಾಕಷ್ಟು ಅವಕಾಶಗಳನ್ನೂ ಕೂಡ ಕೊಟ್ಟಿದ್ದಾರೆ. ಇನ್ನೊಂದು ಗಂಟೆಯೊಳಗಾಗಿ ಎಲ್ಲವೂ ಸಹಿತ ಮುಗಿದು ಹೋಗುತ್ತದೆ. ಬೇಡಿಕೆಗಳು ಜಾಸ್ತಿ ಇವೆ. ದಯವಿಟ್ಟು ಸಹಕಾರ ಕೊಡಿ. ಇನ್ನರ್ಧ ಅಥವಾ ಮುಕ್ಕಾಲು ಗಂಟೆಯಲ್ಲಿ ಮುಗಿಸಿ ಬಿಡೋಣ. ಮಾನ್ಯ ಶಿಕ್ಷಣ ಸಚಿವರು ದಯವಿಟ್ಟು ರಿಪ್ಲೈ ಕೊಡಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ :– .... ಸತ್ಯ ಹೇಳಬೇಕೆಂದರೆ, ನನಗೆ ಬೆಳಿಗ್ಗೆ 3–4 ಫೋನ್ ಮಾಡಿ ಕೇಳಿದರು, ನಿನ್ನೆ ನಾನು.....

ಶ್ರೀ ಬಸವರಾಜ ಎಸ್. ಹೊರಟ್ಟಿ :– ಮಾನ್ಯ ಉಪಾಧ್ಯಕ್ಷರೆ, ನಾಳೆ ಬೇಕಾದರೆ ಬೆಳಿಗ್ಗೆ 9 ಗಂಟೆಗೆ ಸೇರೋಣ. ಎಲ್ಲರೂ ಬೇಸರದಿಂದಿರುವಾಗ ಸದನ ನಡೆಸಲಿಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ತನ್ವೀರ್ ಸೇಠ್ :– ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿದ್ಧವಾಗಿದೆ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಉಪಾಧ್ಯಕ್ಷರೆ, ಇಡೀ ಸದನದ ಸದಸ್ಯರು ಇವತ್ತು ಸದನ ನಡೆಸುವುದು ಬೇಡ, ನಾಳೆ ನಡೆಸೋಣ ಎಂದು ಹೇಳುತ್ತಿದ್ದಾರೆ. ಸದನದ.....

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :– ಮಾನ್ಯ ಉಪಾಧ್ಯಕ್ಷರೆ, ಇದೊಂದು ವಿಚಿತ್ರವಾದಂತಹ ಸನ್ನಿವೇಶ.

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ :– ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಸದಸ್ಯರು ಟೈಮ್ ಕೇಳುತ್ತಿದ್ದಾರೆ. ಅದನ್ನು ಕೊಡಿ. ಸರ್ಕಾರದಿಂದಲೂ ನಾವು ಉತ್ತರ ಕೊಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಉಪಾಧ್ಯಕ್ಷರೆ, ಇಡೀ ಸದನ ಸದನವನ್ನು ನಾಳೆಗೆ ಮುಂದಕ್ಕೆ ಹಾಕಿ ಎಂದು ಒಕ್ಕೊರಲಿನಿಂದ ಹೇಳುತ್ತಿರುವಾಗ, ತಾವೂ ಸಹ ಅದಕ್ಕೆ ಬೆಂಬಲ ಕೊಡಬೇಕು.

(ಗೊಂದಲ)

ಶ್ರೀ ಬಸವರಾಜ್ ಎಸ್. ಹೊರಟ್ಟಿ :– ನಾಳೆ ಬೆಳಿಗ್ಗೆ 9 ಗಂಟೆಗೆ ಸೇರೋಣ.

ಉಪಾಧ್ಯಕ್ಷರು :– ನಾವು ಹೀಗೆಯೇ ಮಾತನಾಡಿಕೊಂಡು 10 ಗಂಟೆಯವರೆಗೆ ಇರೋಣ.

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ :– ನಾವು ಇವತ್ತು ರೆಡಿಯಾಗಿ ಬಂದಿದ್ದೆವು. ಅದು ಈಗ ಹಾಳಾಗುತ್ತದೆ.

(ಗೊಂದಲ)

ಶ್ರೀ ತನ್ವೀರ್ ಸೇತ್ :– ನನ್ನ ಇಲಾಖೆ ಬಗ್ಗೆ ಅವಕಾಶ ಕೊಟ್ಟರೆ ಐದು ನಿಮಿಷಗಳಲ್ಲೇ ಉತ್ತರ ಹೇಳಿ ಮುಗಿಸುತ್ತೇನೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :– ಲೇಬರ್ ಇಲಾಖೆ ಬಗ್ಗೆಯೇ ಹೆಚ್ಚು ಕ್ಲಾರಿಫಿಕೇಷನ್ ಕೇಳುವುದಿದೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಜವಾಬ್ದಾರಿ ಹೊತ್ತು ಈ ಸದನವನ್ನು ನಡೆಸಬೇಕಾದಂತಹ ಕರ್ತವ್ಯ ತಮ್ಮದಾಗಿದೆ. ಈ ಕಡೆ ನಮ್ಮ ಪ್ರತಿ ಪಕ್ಷದ ಸ್ನೇಹಿತರು ಸದನವನ್ನು ಮುಂದೂಡಬೇಕೆಂದು ಹೇಳುತ್ತಿದ್ದಾರೆ. ತಮ್ಮ ಕರ್ತವ್ಯವನ್ನು ತಾವು ನಿರ್ವಹಣೆ ಮಾಡಲೇಬೇಕೆಂದು ಹೇಳುತ್ತಿದ್ದೀರಿ. ನಾನೂ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟೊತ್ತಿಗೆ ರಿಪ್ಲೈ ಮುಗಿದು ಹೋಗುತ್ತಿತ್ತು. ನಾವೂ ಎದ್ದು ಹೋದರೆ ಅದು ಸರಿ ಕಾಣುವುದಿಲ್ಲ. ದಯಮಾಡಿ ಸ್ಪೀಕರ್‌ರವರು ವಿನಂತಿ ಮಾಡಿಕೊಳ್ಳುತ್ತಿದ್ದಾರೆ, ಸ್ವಲ್ಪ ಹೊತ್ತು ಅವಕಾಶ ಕೊಟ್ಟರೆ ರಿಪ್ಲೈ ಮುಗಿದು ಹೋಗುತ್ತದೆ. ಮುಗಿಸಿ ಬಿಡೋಣ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :– ಹಾರ್ಟಿಕಲ್ಚರ್ ಇಲಾಖೆ ಮೇಲೆ ಕ್ಲಾರಿಫಿಕೇಷನ್ ಕೇಳಲು ಒಂದು ಒಂದೂವರೆ ಗಂಟೆಯಾಯಿತು.

(ಗೊಂದಲ)

ಶ್ರೀ ತನ್ವೀರ್ ಸೇತ್ :– ಈಗ ಸಚಿವರು ಉತ್ತರ ಮುಗಿದು ಹೋಗಲಿ. ನಾಳೆ ಬೆಳಿಗ್ಗೆ ಕ್ಲಾರಿಫಿಕೇಷನ್ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ತನ್ವೀರ್ ಸೇತ್ :– ಎಲ್ಲಾದರೂ ಒಂದು ಕಡೆ ನಾವು ಇತ್ಯರ್ಥ ಮಾಡಿಕೊಳ್ಳಬೇಕು. ಮಾನ್ಯ ಸಭಾಧ್ಯಕ್ಷರು ಅವರ ಪೀಠದಿಂದ ಹೇಳಿರುವಂತಹ ಆದೇಶವನ್ನೂ ಸಹ ನಾವು ತೆಗೆದುಕೊಳ್ಳಬೇಕು. ಸಭೆಯನ್ನು ನಡೆಸಬೇಕಾದರೆ ಅದನ್ನು ನಾವು ಗೌರವ ಮತ್ತು

ಘನತೆಯಿಂದ ನಡೆಸಬೇಕಾಗುತ್ತದೆ. ತಾವೆಲ್ಲರೂ ಎದ್ದು ನಿಂತಿದ್ದು ಯಾವುದೇ ರೀತಿಯಾದಂತಹ ಸ್ಪಷ್ಟವಾದಂತಹ ಆದೇಶ ಬರದಿರುವುದರಿಂದ, ಸರ್ಕಾರದಿಂದ ವಿನಂತಿ ಮಾಡಿಕೊಳ್ಳಬೇಕಾಗಿರತಕ್ಕಂಥದ್ದು ನಮ್ಮ ಕರ್ತವ್ಯವಾಗಿದೆ.

ಶ್ರೀ ಅರಗ ಜ್ಞಾನೇಂದ್ರ :– ಮಹೇಶ್ ಭೂಪತಿ ಅವರ ಸನ್ಮಾನ ಕಾರ್ಯಕ್ರಮಕ್ಕೆ ನಾವ್ಯಾರೂ ಹೋಗಬಾರದೇ? ಈಗಾಗಲೇ ಏಳು ಕಾಲು ಗಂಟೆ ಆಗಿದೆ. ಏಳೂವರೆ ಗಂಟೆಗೆ ಕಾರ್ಯಕ್ರಮ ಆರಂಭವಾಗುತ್ತದೆ. ನಾವು ನಮ್ಮ ನಮ್ಮ ರೂಮುಗಳಿಗೆ ಹೋಗಿ ಆ ಕಾರ್ಯಕ್ರಮಕ್ಕೆ ಬರಬೇಕಲ್ಲವೇ? ನಾವು ಹೋಗದೆ ಆ ಕಾರ್ಯಕ್ರಮಗಳಿಗೆ ಅರ್ಥವೇ ಇಲ್ಲ. ಸ್ಪೀಕರ್ ಸಹಿತ ನಾವೆಲ್ಲರೂ ಸಹಿತ ಸದರಿ ಕಾರ್ಯಕ್ರಮಕ್ಕೆ ಬರಬೇಕೆಂದು invitation ಹಂಚಿದ್ದೀರಿ, ಆಹ್ವಾನ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೋಗಿದ್ದಾರೆ.

ಉಪಾಧ್ಯಕ್ಷರು :– ಹಾಗಾದರೆ ನಾನು ಇವತ್ತಿನ question hour ಅನ್ನು cancel ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ :– ಅದನ್ನು ನಾಳೆ ದಿವಸಕ್ಕೆ ಹಾಕಿ.

ಉಪಾಧ್ಯಕ್ಷರು :– ಆ ಬಗ್ಗೆ ಮುಂದೆ ಯಾವಾಗಲಾದರೂ ನೋಡೋಣ.

ಶ್ರೀ ಅರಗ ಜ್ಞಾನೇಂದ್ರ :– ಅದನ್ನು ಮುಂದೂಡುತ್ತೇವೆ ಎಂದು ಹೇಳಿ ಸಾರ್.

ಉಪಾಧ್ಯಕ್ಷರು :– ಇವತ್ತಿಗೆ ಅದು ಕ್ಯಾನ್ಸಲ್ ಆಗಿದೆ.

ಶ್ರೀ ಅರಗ ಜ್ಞಾನೇಂದ್ರ :– ಉತ್ತರಗಳನ್ನು ಲೇ ಮಾಡಲಿಲ್ಲವಲ್ಲಾ. ಮಂತ್ರಿಗಳೇ ಯಾರೂ ಇಲ್ಲ.

ಉಪಾಧ್ಯಕ್ಷರು :– ನಾಳೆ ಅದನ್ನು ಲೇ ಮಾಡೋಣ. ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ರಾತ್ರಿ 7 ಗಂಟೆ 17 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 15ನೇ ಜುಲೈ 2005ರ ಶುಕ್ರವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)